ಗೃಹನಿರ್ಮಾಣ ಸಹಕಾರ ಸಂಘ (ನಿ), ಬೆಂಗಳೂರು.

8) ಬಾಪೂಜಿ ಗೃಹನಿರ್ಮಾಣ ಸಹಕಾರ ಸಂಘ (ನಿ) ಬೆಂಗಳೂರು

9) ವಿಜಯ ಬ್ಯಾಂಕ್ ನೌಕರರ ಗೃಹನಿರ್ಮಾಣ ಸಹಕಾರ ಸಂಘ (ನಿ), ಬೆಂಗಳೂರು

2) ಈ ಸಂಘಗಳ ವಿಚಾರಣೆಗಳು ಈ ಕೆಳಕಂಡ ದಿನಾಂಕಗಳಂದು ಪ್ರಾರಂಭವಾಗಿರುತ್ತದೆ.

ಸಂಘದ ಹೆಸರು	ವಿಚಾರಣೆ ಪ್ರಾರಂಭಿಸಿದ ದಿನಾಂಕ
1) ಜವಾಹರ್ ಗೃ.ನಿ.ಸ.ಸಂ. (ನಿ), ಬೆಂಗಳೂರು	28-4-2001
2) ಏರ್‌ಕ್ರಾಫ್ಟ್ ನೌಕರರ ಗೃ.ನಿ.ಸ.ಸಂ. (ನಿ), ಬೆಂಗಳೂರು	16-3-2001
3) ತಾಸಕರ ಗೃ.ನಿ.ಸ.ಸಂ.(ನಿ), ಬೆಂಗಳೂರು	27-11-2000
4) ಸಹಕಾರ ಇಲಾಖಾ ನೌಕರರ ಗೃ.ನಿ.ಸ.ಸಂ.(ನಿ), ಬೆಂಗಳೂರು	26-5-2000
5) ತಲಕಾವೇರಿ ಗೃ.ನಿ.ಸ.ಸಂ.(ನಿ). ಬೆಂಗಳೂರು.	29-6-2000
6) ಎಸ್ಕಾರ್ಟ್ಸ್ ಅಂಡ್ ಗೊಯೆಟ್ಸ್ ನೌಕರರ ಗೃ.ನಿ.ಸ.ಸಂ.ನಿ,	29-6-2000
7) ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಕಾರ್ಯಕರ್ತರ ಗೃ.ನಿ.ಸ.ಸಂ.ನಿ, ಬೆಂಗಳೂರು	31-8-2000
8) ಬಾಪೂಜಿ ಗೃ.ನಿ.ಸ.ಸಂ.ನಿ, ಬೆಂಗಳೂರು	15-10-2000
9) ವಿಜಯ ಬ್ಯಾಂಕ್ ನೌಕರರ ಗೃ.ನಿ.ಸ.ಸಂ.ನಿ, ಬೆಂಗಳೂರು	29-06-2001

3) 3 ಸಹಕಾರ ಸಂಘಗಳ ವಿಚಾರಣಾ ವರದಿ ಬಂದಿದ್ದು ಕ್ರಮ ಕೈಗೊಳ್ಳಲಾಗಿದ್ದು, ಉಳಿಕೆ ವಿಚಾರಣೆಗಳನ್ನು ತ್ವರಿತವಾಗಿ ಮುಗಿಸಿ ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಅಂಗವಿಕಲರಿಗಾಗಿ ಹಣಕಾಸು ಸಂಸ್ಥೆ ಪ್ರಾರಂಭಿಸುವುದು.

ಶ್ರೀ ಎ.ರಾಮದಾಸ್(ಕೃಷ್ಣರಾಜ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿ ಅಂಗವಿಕಲರಿಗಾಗಿ ಪ್ರತ್ಯೇಕ ಹಣಕಾಸು ಸಂಸ್ಥೆ ಸ್ಥಾಪಿಸುವುದಾಗಿ, ರಾಜ್ಯಸರ್ಕಾರ ಯಾವಾಗ ಘೋಷಿಸಿದೆ?

ಆ) ಹಾಗಿದ್ದಲ್ಲಿ, ಈ ಹಣಕಾಸು ಸಂಸ್ಥೆಯ ಪ್ರಾರಂಭ ಯಾವಾಗ ಮಾಡಲಾಗಿದೆ? ರಾಜ್ಯ ಸರ್ಕಾರ ಇದಕ್ಕಾಗಿ ನೀಡಿದ ಹಣ ಎಷ್ಟು?

ಇ) ಈ ಯೋಜನೆಯಡಿ ಕೇಂದ್ರ ಸರ್ಕಾರ ನೀಡುವ ಹಣ ಎಷ್ಟು? ಹಾಗಿದ್ದಲ್ಲಿ, ಎಷ್ಟು ಹಣ ಈ ಸಂಸ್ಥೆಗೆ ಬಂದಿದೆ?

ಈ) ಎಷ್ಟು ಜನ ಅಂಗವಿಕಲರಿಗೆ ಯಾವ ಯಾವ ಕೆಲಸಗಳಲ್ಲಿ ಸಹಾಯ ನೀಡಲಾಗುತ್ತಿದೆ?

ಶ್ರೀಮತಿ ಮೋಟಮ್ಮ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

ಅ) 2000-01ನೇ ಸಾಲಿನಲ್ಲಿ ಅಂಗವಿಕಲರಿಗಾಗಿ ಪ್ರತ್ಯೇಕ ಹಣಕಾಸು ಸಂಸ್ಥೆ ಸ್ಥಾಪಿಸುವುದಕ್ಕೆ ಸರ್ಕಾರವು, ತಾತ್ವಿಕವಾಗಿ ಒಪ್ಪಿರುತ್ತದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದ್ದು, 2001-02 ನೇ ಸಾಲಿನಲ್ಲಿ ರೂ.20.00 ಲಕ್ಷಗಳ ಆಯವ್ಯಯವನ್ನು ಒದಗಿಸಿದೆ.

ಇ) ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿರುವ, ರಾಷ್ಟ್ರೀಯ ಅಂಗವಿಕಲರ ಅಭಿವೃದ್ಧಿ ಮತ್ತು ಹಣಕಾಸು ನಿಗಮವು, ವಿವಿಧ ರೀತಿಯ ಅರ್ಹ ಅಂಗವಿಕಲರಿಗೆ ಗರಿಷ್ಠ 20.00 ಲಕ್ಷಗಳವರೆಗೆ ಸಾಲವನ್ನು ಮಂಜೂರು ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

ರಾಜ್ಯದಲ್ಲಿ ಅಂಗವಿಕಲರ ಅಭಿವೃದ್ಧಿ ನಿಗಮವು ಸ್ಥಾಪನೆಯಾಗಿಲ್ಲದೇ ಇರುವುದರಿಂದ ಯಾವುದೇ ರೀತಿ ಹಣಕಾಸಿನ ನೆರವು ಲಭ್ಯವಾಗಿರುವುದಿಲ್ಲ.

ಈ) ಅಂಗವಿಕಲರ ಅಭಿವೃದ್ಧಿ ನಿಗಮವು, ಸ್ಥಾಪನೆಯಾಗಿಲ್ಲದೇ ಇರುವುದರಿಂದ, ಈ ಯೋಜನೆಯಡಿಯಲ್ಲಿ ಸಹಾಯ ನೀಡಲಾಗಿರುವುದಿಲ್ಲ. ಆದರೆ, ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿಯಲ್ಲಿ ಸಹಾಯ ಮಾಡಲಾಗುತ್ತಿದೆ.

ರಾಜ್ಯದಲ್ಲಿ ಎಲ್ಲಾ ಹಂತಗಳಲ್ಲಿ ಕನ್ನಡ ಬಳಸುವುದು.